ದಿನಾಂಕ.**04-12-2018** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

## ಮುಂದುವರಿದ ಪಾಟೀ ಸವಾಲು - ವಾದಿ ಪರ ಶ್ರೀ.ಸಿ.ಬಿ.ವಿ ವಕೀಲರಿಂದ.

**1.** ಜಾವೂರು ಗ್ರಾಮದ ಸ.ನಂ.**97** ರಲ್ಲಿ ಅರ್ಧ ಜಮೀನನ್ನು ಮಾರಾಟ ಮಾಡಿದ ನಂತರ ಅವರ ನನ್ನ ಮೇಲೆ ಒಂದು ದಾವೆ ಹಾಕಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ಸ.ನಂ.**97** ರಲ್ಲಿ ನನ್ನ ಚಿಕ್ಕಪ್ಪ ಅರ್ಧ ಭಾಗವನ್ನು ಮಾರಾಟ ಮಾಡಿದ್ದು ಅದನ್ನು ಪ್ರಶ್ನಿಸಿ ದಾವೆಯನ್ನು ದಾಖಲು ಮಾಡಿರುತ್ತೀರಾ ಎಂದರೆ ಸಾಕ್ಷಿ ನನ್ನ ತಂದೆ ಮಾಡಿರಬಹುದು ಎನ್ನುತ್ತಾರೆ. ಸದರಿ ದಾಖಲಾತಿಗಳು ನನಗೆ ದೊರೆತಲ್ಲಿ ನಾನು ನ್ಯಾಯಾಲಯಕ್ಕೆ ಹಾಜರುಮಾಡುತ್ತೇನೆ.

**2.** ದಾವಾ ಸ.ನಂ.**93** ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ. ದಿ.**5.3.1981** ವಿಭಾಗದಲ್ಲಿ ಸ.ನಂ.**93** ರ ಜಜಮೀನು ನನ್ನ ಚಿಕ್ಕಪ್ಪನ ಹಿಸ್ಸೆಗೆ ಬಂದಿರುತ್ತದೆ ಎಂದರೆ ಇದರ ಬಗ್ಗೆ ನನ್ನ ತಂದೆ ನನಗೆ ಹೇಳಿರುವುದಿಲ್ಲ ಎನ್ನುತ್ತಾರೆ, ಸಾಕ್ಷಿ ಸ್ವತಃ ಅದು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಆಗಿರುತ್ತದೆ ಎನ್ನುತ್ತಾರೆ. **1973** ರಲ್ಲೇ ಆ ಸ್ವತ್ತನ್ನು ನನ್ನ ತಂದೆ ಖರೀದಿ ಮಾಡಿರುವ ಕಾರಣ ಈಗ ಅದಕ್ಕೆ ಸಂಬಂಧಪಟ್ಟ ದಾಖಲಾತಿಗಳು ನನ್ನ ಬಳಿ ಇರುವುದಿಲ್ಲ.

**3.** ನಾನು **1967** ರಲ್ಲಿ ಹುಟ್ಟಿರುತ್ತೇನೆ. ದಾವಾ ಸ್ವತ್ತು ನನ್ನ ತಂದೆಗೆ ಕ್ರಯವಾದಾಗ ನನಗೆ **7** ರಿಂದ **8** ವರ್ಷಗಳಾಗಿತ್ತು ಎಂದರೆ ನಿಜ. ನಾನು ಆ ಸಮಯದಲ್ಲಿ ಅಪ್ರಾಪ್ತ ವಯಸ್ಕನಾಗಿದ್ದ ಕಾರಣ ನನಗೆ ಆ ಸ್ವತ್ತನ್ನು ಖರೀದಿ ಮಾಡಿದ ಮಾಹಿತಿ ಇರುವುದಿಲ್ಲ ಎಂದರೆ ನಿಜ. **1994** ನೇ ಸಾಲಿನಲ್ಲಿ ದಾವಾ ಸ್ವತ್ತನ್ನು **4** ನೇ ಪ್ರತಿವಾದಿಯ ಗಂಡ ರಾಜಪ್ಪ ವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ರಾಜಪ್ಪನವರಿಗೆ ಮಾರಾಟ ಮಾಡುವ ಯಾವುದೇ ಹಕ್ಕು ಇರುವುದಿಲ್ಲ ಎನ್ನುತ್ತಾರೆ. ಮಾರಾಟ ಮಾಡುವ ಸಮಯದಲ್ಲಿ ರಾಜಪ್ಪನವರ ಹೆಸರಿಗೆ ಖಾತೆ ಇತ್ತು ಎಂದರೆ ಸಾಕ್ಷಿ ಮೋಸದಿಂದ ಖಾತೆ ಮಾಡಿಸಿಕೊಂಡಿರುತ್ತಾರೆ ಎನ್ನುತ್ತಾರೆ. ಆ ಸ್ವತ್ತಿನ ಸ್ವಾಧೀನದಲ್ಲಿ ನಾವೇ ಇದ್ದೆವು. ಕ್ರಯಪತ್ರದ ದಿನದಂದು ವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. .ದಿ.**9.3.1995** ರಲ್ಲಿ

ರಾಜಪ್ಪನವರು ದಾವಾ ಸ್ವತ್ತನ್ನು ಮಾರಾಟ ಮಾಡಿರುವುದನ್ನು ಪ್ರಶ್ನಿಸಿರುತ್ತೀರಾ ಎಂದರೆ ಸಾಕ್ಷಿಯು ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಕೇಸು ನಡೆಯುತ್ತಿತ್ತು ಎನ್ನುತ್ತಾರೆ. ಈ ದಾವೆಯನ್ನು ಹೊರತುಪಡಿಸಿ ವಾದಿಗೆ ಆಗಿರುವ ಕ್ರಯಪತ್ರವನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ಅದನ್ನು ನೋಡಿಕೊಳ್ಳುತ್ತಿದ್ದ ಕಾರಣ ನನಗೆ ಗೊತ್ತಿಲ್ಲ ಎನ್ನುತ್ತಾರೆ. **1** ಎಕರೆ **18** ಗುಂಟೆ ಜಮೀನಿನಲ್ಲಿ ರೇವಣಮ್ಮನವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಿ.**5.3.1981** ರಿಂದ ನಾನಾಗಲೀ ನನ್ನ ತಂದೆಯಾಗಲೀ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರವಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ದಾವಾ ಸ್ವತ್ತಿನ ಸ್ವಾಧೀನಕ್ಕೆ ನಾನು ತಂಟೆ ತಕರಾರು ಮಾಡಿರುತ್ತೇನೆ ಎಂದರೆ ಸಾಕ್ಷಿ ಅವರೇ ತಂಟೆ ತಕರಾರು ಮಾಡಿರುತ್ತಾರೆ ಎನ್ನುತ್ತಾರೆ.

ಮರುವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ

ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ
ಪ್ರ.ದ.ನ್ಯಾದಂ.ರವರು, ತರೀಕೆರೆ.